## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1018 (1205) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ವಿ. ಸಂಕನೂರ |
| ಉತ್ತರಿಸುವ ದಿನಾಂಕ | : | 15-12-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿಳ್ಳೆಕ್ಯಾತಸ್ ಎಂಬ ಸಮುದಾಯವು 101 ಪರಿಶಿಷ್ಟ ಜಾತಿಗಳಲ್ಲಿ ಕ್ರಮ ಸಂಖ್ಯೆ : 96ನೆಯದಾಗಿದ್ದು, ಇದೇ ಜಾತಿಯ ಸಮನಾರ್ಥಕ್ಕೆ ಪದ ಶಿಳ್ಳೆಕ್ಯಾತಸ್ ಪದವು ಪ್ರವರ್ಗ-1ರಲ್ಲಿ ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು) | ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: BC/12016/34/76-SCT-5 Dated:27-07-1977 ರಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳನ್ನು ನಮೂದಿಸಲಾಗಿದೆ.<br><br>ಪರಿಶಿಷ್ಟ ಜಾತಿಯ ಪಟ್ಟಿಯ ಕ್ರಮ ಸಂಖ್ಯೆ : 96 ರಲ್ಲಿ Sillekyathas ಜಾತಿಯನ್ನು ನಮೂದಿಸಲಾಗಿದ್ದು, ಅರ್ಹ ನೈಜ ಪರಿಶಿಷ್ಟ ಜಾತಿಯವರಿಗೆ ಜಾತಿ ಪ್ರಮಾಣ ಪತ್ರವನ್ನು ಮತ್ತು ಸರ್ಕಾರಿ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುತ್ತಿದೆ.<br><br>ಸರ್ಕಾರಿ ಆದೇಶ ಸಂಖ್ಯೆ : ಸಕಇ 225 ಬಿಸಿಎ 2000, ಬೆಂಗಳೂರು ದಿನಾಂಕ: 30ನೇ ಮಾರ್ಚ್ 2002 ರ ಪ್ರವರ್ಗ-1ರ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ 10(i) ರಲ್ಲಿ Killikyata ಜಾತಿಯನ್ನು ನಮೂದಿಸಿದ್ದು, ಪ್ರವರ್ಗ-1 ರ ಮೀಸಲಾತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. |
| ಆ) | ಭಾರತ ಸರ್ಕಾರದ 101 ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೆಂಟ್ರಲ್ ACT 108ರ 1976 ದಿನಾಂಕ 18 ಸೆಪ್ಟೆಂಬರ್ 1976 ಕರ್ನಾಟಕ | ಭಾರತ ಸರ್ಕಾರದ ಅಧಿಸೂಚನೆ ದಿನಾಂಕ 18 ಸೆಪ್ಟೆಂಬರ್ 1976 ರಲ್ಲಿ "Sillekyathas" ಮಾತ್ರ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮಸಂಖ್ಯೆ: 96 ರಲ್ಲಿ ಇರುತ್ತದೆ. |

| | | |
|---|---|---|
| | ಆದೇಶ ದಿನಾಂಕ: 25-11-1976 ರಲ್ಲಿ ಶಿಳ್ಳೆಕ್ಯಾತ/ ಕಿಳ್ಳೆಕ್ಯಾತ ಸೇರ್ಪಡೆ ಮಾಡಿರುವುದು ನಿಜವೇ: ಹಾಗಿದ್ದಲ್ಲಿ, ಮಾಹಿತಿ ನೀಡುವುದು; | ಸದರಿ ಆದೇಶ ದಿನಾಂಕ:27-07-1977 ರಿಂದ ಜಾರಿಗೆ ಬಂದಿರುತ್ತದೆ.<br><br>ಆದರೆ, ಸದರಿ ಪಟ್ಟಿಯಲ್ಲಿ "ಕಿಳ್ಳೆಕ್ಯಾತ " ಸೇರಿರುವುದಿಲ್ಲ. ಪ್ರಸ್ತುತ ಕಿಳ್ಳೆಕ್ಯಾತ ಸಮುದಾಯ ಹಿಂದುಳಿದ ವರ್ಗಗಳ ಪ್ರವರ್ಗ-1 ರ ಕ್ರಮಸಂಖ್ಯೆ 10ರ ಬುಡುಬುಡುಕಿ ಸಮಾನಂತರ ಪದವಾಗಿ ಕ್ರಮಸಂಖ್ಯೆ 10(i) ರಲ್ಲಿ ಇರುತ್ತದೆ. |
| ಇ) | ಸರ್ಕಾರವು ಆದೇಶ ಮಾಡುವಲ್ಲಿ ಶಿಳ್ಳೆಕ್ಯಾತ /ಕಿಳ್ಳೆಕ್ಯಾತ ಎಸ್.ಡಬ್ಲ್ಯೂ.ಎಲ್ 12 ಟಿ.ಬಿ.ಎಸ್ 77 ದಿನಾಂಕ: 22.02.1997 ರಂದು ಎಸ್.ಟಿ ಪಟ್ಟಿಯಲ್ಲಿರುವ ಆದೇಶವನ್ನು ದಿನಾಂಕ: 23.01.1978 ರಂದು ರದ್ದುಮಾಡಿ ಪುನಃ ಶಿಳ್ಳೆಕ್ಯಾತಾಸ್ ಸಮನಾರ್ಥಕ ಪದ ಕಿಳ್ಳೆಕ್ಯಾತ ಸೇರಿಸುವಲ್ಲಿ ಕೈಬಿಟ್ಟಿರುವುದು ನಿಜವೇ; ಮಾಹಿತಿ ನೀಡುವುದು; | Backward Tribes ಪಟ್ಟಿಯಲ್ಲಿರುವ ಕಿಳ್ಳೇಕ್ಯಾತಸ್ ಎಂಬ ಪದವನ್ನು ಸರ್ಕಾರದ ಆದೇಶ ದಿನಾಂಕ:22-02-1977 ರಲ್ಲಿ ಕೈಬಿಡಲಾಗಿರುವುದನ್ನು ಸರ್ಕಾರದ ಅದೇಶ ದಿನಾಂಕ:23-01-1978 ರಲ್ಲಿ ಅಗತ್ಯ ಕ್ರಮಕ್ಕಾಗಿ ಇತರೆ ಇಲಾಖೆಗಳಿಗೆ ತಿಳಿಸಲಾಗಿದೆ. ಆದರೆ, ಶಿಳ್ಳೆ ಕ್ಯಾತಾಸ್ ಜಾತಿಯ ಪರ್ಯಾಯ ಪದಗಳಾದ ಕಿಳ್ಳೆಕ್ಯಾತಾಸ್, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಸಮಾಜ ಶಾಸ್ತ್ರ ವಿಭಾಗಕ್ಕೆ ನೀಡಲಾಗಿತ್ತು. ಆದರೆ, ಸಮಾಜಶಾಸ್ತ್ರಜ್ಞರ ಬದಲಿಗೆ ಮಾನವಶಾಸ್ತ್ರಜ್ಞರಿಂದ ಕುಲಶಾಸ್ತ್ರೀಯ ಅಧ್ಯಯನ ಮಾಡುವುದು ಸೂಕ್ತವಾಗಿದೆ ಎಂದು ಭಾವಿಸಿ, ಸರ್ಕಾರದ ಆದೇಶ ದಿನಾಂಕ:26-06-2022ರಂತೆ ಮೈಸೂರು ವಿಶ್ವವಿದ್ಯಾಯಲಯದ ಮಾನವಶಾಸ್ತ್ರ ವಿಭಾಗದಿಂದ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಆದೇಶವಾಗಿದ್ದು, ವರದಿ ನಿರೀಕ್ಷಿಸಲಾಗಿದೆ. |

| | | |
|---|---|---|
| | | ಭಾರತ ಸಂವಿಧಾನದ ಅನುಚ್ಛೇದ 341 (2) ರ ಪ್ರಕಾರ ಯಾವುದೇ ಜಾತಿ ಅಥವಾ ಉಪ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸುವ/ಬದಲಾಯಿಸುವ ಅಧಿಕಾರ ಭಾರತದ ಸಂಸತ್‌ಗೆ ಇರುತ್ತದೆ. ರಾಜ್ಯ ಸರ್ಕಾರಕ್ಕೆ ಈ ರೀತಿಯ ಅಧಿಕಾರ ಇರುವುದಿಲ್ಲ. |
| ಈ) | ಸರ್ಕಾರದ ಆದೇಶ ಸಂಖ್ಯೆ : ಸಕಇ/10/ಎಸ್.ಎಲ್.ಪಿ/2015 ಬೆಂಗಳೂರು ದಿನಾಂಕ: 12.01.2016 ರಂದು ಸರ್ಕಾರದ ಆದೇಶ ಮಾಡಿರುವಂತೆ ಅಲೇಮಾರಿ ಸೂಕ್ಷ್ಮ ಪರಿಶಿಷ್ಟ ಜಾತಿ/ ವರ್ಗದ ಜನಾಂಗದ ಜಾತಿ ಪಟ್ಟಿಗಳ ಅನುಬಂಧ-1ರ ಕ್ರಮ ಸಂಖ್ಯೆ 4ರ ಅನ್ವಯ ಈಗಾಗಲೇ ಶಿಳ್ಳೆಕ್ಯಾತಾಸ್/ ಶಿಳ್ಳೆಕ್ಯಾತ ಎರಡು ಪದಗಳ ಪುನಃ ಸೇರ್ಪಡೆಯಾಗಿದ್ದು ಇದರೊಂದಿಗೆ ಸಮನಾರ್ಥಕ ಪದ ಕಿಳ್ಳೆಕ್ಯಾತ ಸೇರ್ಪಡೆ ಮಾಡುವಲ್ಲಿ ಇಲಾಖೆ ಚಿಂತನೆ ನಡೆಸಿದೆಯೇ? | ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್.ಎಲ್.ಪಿ/2015 ಬೆಂಗಳೂರು ದಿನಾಂಕ: 12.01.2016 ರಲ್ಲಿ ಶಿಳ್ಳೆಕ್ಯಾತ ಜಾತಿ ಮಾತ್ರ ಇರುತ್ತದೆ. ಕಿಳ್ಳೆಕ್ಯಾತ ಇರುವುದಿಲ್ಲ. ಭಾರತ ಸಂವಿಧಾನದ ಅನುಚ್ಛೇದ 341 (2) ರ ಪ್ರಕಾರ ಯಾವುದೇ ಜಾತಿ ಅಥವಾ ಉಪ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸುವ/ಬದಲಾಯಿಸುವ ಅಧಿಕಾರ ಭಾರತದ ಸಂಸತ್‌ಗೆ ಇರುತ್ತದೆ. ರಾಜ್ಯ ಸರ್ಕಾರಕ್ಕೆ ಈ ರೀತಿಯ ಅಧಿಕಾರ ಇರುವುದಿಲ್ಲ. |

**ಸಕಇ 489 ಎಸ್‌ಎಲ್ ಪಿ 2023**

**(ಡಾ ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು